ಆಶ್ರಯ ಮನೆ ಹಂಚಿಕೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 198 (329)
ಸದಸ್ಯರ ಹೆಸರು : ಶ್ರೀ ರಹೀಂ ಖಾನ್ (ಬೀದರ್)
ಉತ್ತರಿಸುವ ಸಚಿವರು : ಶ್ರೀ ವಿ. ಸೋಮಣ್ಣ
(ಮಾನ್ಯ ವಸತಿ ಸಚಿವರು)

ಪ್ರಶ್ನೆಗಳು:-

ಅ) 2008-09, 2009-10 ಮತ್ತು 2010-11ನೇ ಸಾಲಿನಲ್ಲಿ ಆಶ್ರಯ ಅಂಬೇಡ್ಕರ್, ಇಂದಿರಾ ಆವಾಸ್, ಮತ್ಸಾಲಯ, ಬಸವ ವಸತಿ ಹಾಗೂ ಇತರೆ ಯೋಜನೆಗಳಡಿಯಲ್ಲಿ ಮಂಜೂರಾದ ಮನೆಗಳೆಷ್ಟು (ಬೀದರ್ (ಉ) ಕ್ಷೇತ್ರದ ಮಾಹಿತಿಯನ್ನು ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ಆಶ್ರಯ ಯೋಜನೆಯಡಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿತ್ತು. ಈ ಪೈಕಿ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ? ಕ್ಷೇತ್ರವಾರು ಮಾಹಿತಿ ನೀಡುವುದು;

ಇ) ಹಂಚಿಕೆ ಮಾಡದಿರುವ ನಿವೇಶನಗಳು ಎಷ್ಟು ಬಾಕಿ ಇರುತ್ತವೆ? ವಿಳಂಬವಾಗುತ್ತಿರುವುದೇಕೆ? (ವಿವರ ನೀಡುವುದು);

ಈ) ಆಶ್ರಯ ಯೋಜನೆಯಡಿಯಲ್ಲಿ ನಿವೇಶನರಹಿತರಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ತೆಗೆದುಕೊಳ್ಳುವ ಕ್ರಮವೇನು? (ವಿವರ ನೀಡುವುದು);

ಉ) ಆಶ್ರಯ ಸಮಿತಿಗಳನ್ನು ಈ ಹಿಂದೆ ಇದ್ದಂತೆ ರಚಿಸುವ ಅಥವಾ ಬೇರೆ ರೀತಿ ರಚಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ? ಇದ್ದಲ್ಲಿ, ಈ ಸಮಿತಿಗಳನ್ನು ಯಾವಾಗ ರಚಿಸಲಾಗುವುದು; (ವಿವರ ನೀಡುವುದು);

ಉತ್ತರಗಳು:-

ಅ) 2008-09, 2009-10 ಮತ್ತು 2010-11ನೇ ಸಾಲಿನ ಆಶ್ರಯ ಅಂಬೇಡ್ಕರ್, ಇಂದಿರಾ ಆವಾಜ್, ಯೋಜನೆಗಳಡಿ ಬೀದರ್

ಉತ್ತರ ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗಿರುವ ಮನೆಗಳ ವಿವರ ಈ ಕೆಳಗಿನಂತಿದೆ. ಈ ಮೂರು ವರ್ಷಗಳಲ್ಲಿ ಮತ್ಸ್ಯಾಲಯ ಯೋಜನೆಯಡಿ ಯಾವುದೇ ಮನೆಗಳನ್ನು ಹಂಚಿಕೆ ಮಾಡಿರುವುದಿಲ್ಲ.

ಯೋಜನಾವಾರು ಹಂಚಿಕೆ ಮಾಡಲಾದ ಮನೆಗಳ ವಿವರ ಇಂತಿದೆ.

ಮನೆಗಳು:

ಯೋಜನೆಗಳು	ಹಂಚಿಕೆ ಮಾಡಲಾದ ಮನೆಗಳು			ಒಟ್ಟು
ಗ್ರಾಮೀಣ ಆಶ್ರಯ	187	0	0	187
ಗ್ರಾಮೀಣ ಅಂಬೇಡ್ಕರ್	28	05	0	33
ಇಂದಿರಾ ಆವಾಜ್	120	123	0	243
ಬಸವ ವಸತಿ ಯೋಜನೆ	0	0	4000	4000
ಒಟ್ಟು	**335**	**128**	**4000**	**4463**

ಆ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಉತ್ತರ ಕ್ಷೇತ್ರಕ್ಕೆ 4463 ಮನೆಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿತ್ತು.

ಅದೇ ರೀತಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 483 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಬೀದರ್ ತಾಲ್ಲೂಕು ಮಾಹಿತಿ ಈ ಕೆಳಗಿನಂತಿದೆ.

ಯೋಜನೆಗಳು	ಹಂಚಿಕೆ ಮಾಡಲಾದ ನಿವೇಶನಗಳು			ಒಟ್ಟು
ಗ್ರಾಮೀಣ ನಿವೇಶನ	0	0	200	200
ನಗರ ನಿವೇಶನ	0	0	283	283
ಒಟ್ಟು	**0**	**0**	**483**	**483**

ಇ) ಕಳೆದ ಮೂರು ವರ್ಷಗಳಲ್ಲಿ ಬೀದರ್ ತಾಲ್ಲೂಕಿನಲ್ಲಿ 2004 ನಿವೇಶನಗಳನ್ನು ಹಂಚಿಕೆ ಮಾಡಲು ಗುರಿ ಹೊಂದಲಾಗಿದ್ದು, ಆ ಪೈಕಿ ಒಟ್ಟು 483 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಜಮೀನಿನ ಕೊರತೆಯಿಂದಾಗಿ ಗುರಿಗೆ ಅನುಗುಣವಾಗಿ ಪ್ರಗತಿ ಸಾಧಿಸಲು ಸಾಧ್ಯವಾಗಿರುವುದಿಲ್ಲ. ಹಂಚಿಕೆ ಮಾಡಲು 1521 ನಿವೇಶನಗಳ ಗುರಿ ಬಾಕಿ ಉಳಿದಿರುತ್ತದೆ.

ಯೋಜನೆಗಳು	ಶ್ರೇಣಿ	ಉದ್ದೇಶಿಸಲಾಗಿದ್ದ ಗುರಿ	ಹಂಚಿಕೆಯಾದ ನಿವೇಶನಗಳು	ಗುರಿ ಮುಟ್ಟಲು ಆಗದ ಸಂಖ್ಯೆ
ಗ್ರಾಮೀಣ ನಿವೇಶನ	2008–2009	58	0	58
	2009–2010	58	0	58

	2010–2011	1173	200	973
ನಗರ ನಿವೇಶನ	2008–2009	167	0	167
	2009–2010	125	0	125
	2010–2011	423	283	140
ಒಟ್ಟು		**2004**	**483**	**1521**

ಈ) ಆಶ್ರಯ ಯೋಜನೆಯಡಿ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ತೆಗೆದುಕೊಳ್ಳುವ ಕ್ರಮಗಳು ಈ ರೀತಿ ಇದೆ.

- ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರಿ ಭೂಮಿ ಲಭ್ಯವಿಲ್ಲದ ಸಂದರ್ಭದಲ್ಲಿ ಖಾಸಗಿ ಜಮೀನನ್ನು ಮಾರ್ಗಸೂಚಿ ಬೆಲೆಯ ಮೂರು ಪಟ್ಟಿನವರೆಗೆ ಆದರೆ ಗ್ರಾಮೀಣ ಪ್ರದೇಶದಲ್ಲಿ (ಯಾವುದೇ ಕಾರಣಕ್ಕೂ ಎಕರೆಗೆ ಗರಿಷ್ಟ ರೂ. 3.00 ಲಕ್ಷ ಮೀರದಂತೆ) ಖರೀದಿಸಲು ಅವಕಾಶ ನೀಡಲಾಗಿದೆ.
- ಒಂದು ವೇಳೆ ಸರ್ಕಾರದ ಮಾರ್ಗಸೂಚಿ ದರಗಳಿಗೆ ಜಮೀನು ದೊರಕದ ಸಂದರ್ಭದಲ್ಲಿ ಸರ್ಕಾರದಿಂದ ನೀಡಲಾಗುವ ಅನುದಾನದ ಜೊತೆಗೆ ಹೆಚ್ಚುವರಿಯಾಗಿ ಬೇಕಾದ ಅನುದಾನವನ್ನು ನಿವೇಶನ ಪಡೆಯುವ ಫಲಾನುಭವಿಗಳಿಂದ ವಂತಿಕೆ ರೂಪದಲ್ಲಿ ಪಡೆದು ಖಾಸಗಿ ಜಮೀನನ್ನು ಖರೀದಿಸಿ ನಿವೇಶನ ರಹಿತರಿಗೆ ನಿವೇಶನಗಳನ್ನು ಒದಗಿಸಲು ಅವಕಾಶವಿದೆ.
- ಒಂದು ವೇಳೆ ಮಾರ್ಗಸೂಚಿ ದರದ ಮೂರು ಪಟ್ಟು ದರಕ್ಕಿಂತಲೂ ಹೆಚ್ಚಿನ ದರ ಪಾವತಿಸಬೇಕಾದಲ್ಲಿ, ಫಲಾನುಭವಿಗಳ ವಂತಿಕೆ ಕೂಡ ಲಭ್ಯವಾಗದಿದ್ದಲ್ಲಿ, ಪ್ರಕರಣವಾರು ವಿವರಗಳನ್ನು ಸೂಕ್ತ ಸಮಜಾಯಿಷಿಯೊಂದಿಗೆ ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆದ ನಂತರ ಅನುದಾನ ಬಿಡುಗಡೆ

ಮಾಡಲಾಗುತ್ತಿದೆ.

- ಮೇಲ್ಕಾಣಿಸಿದಂತೆಯೂ ಜಮೀನು ಖರೀದಿ ಸಾಧ್ಯವಾಗದಿದ್ದ ಪಕ್ಷದಲ್ಲಿ, ಮನೆ ನಿವೇಶನಗಳ ಹಂಚಿಕೆಗಾಗಿ ಜಿಲ್ಲಾಧಿಕಾರಿಗಳಿಗೆ The Karnataka Acquision of Lands for Grant of House Sites Act, 1972 (Karnataka Act 18 of 1973) ಮತ್ತು ಅದಕ್ಕೆ ಸಂಬಂಧಿಸಿದ ನಿಯಮಾವಳಿಗಳಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಸತಿಗೆ ಯೋಗ್ಯವಾದ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಂದರ್ಭಾನುಸಾರ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ತಿಳಿಸಿದೆ.

ಉ) ಆಶ್ರಯ ಸಮಿತಿಗಳನ್ನು ಈಗಾಗಲೇ ರಚಿಸಲಾಗಿದ್ದು, ಬೇರೆ ರೀತಿ ರಚಿಸುವ ಉದ್ದೇಶ ಇರುವುದಿಲ್ಲ.

ಅಂಗನವಾಡಿ ಕೇಂದ್ರಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 199 (330)
ಸದಸ್ಯರ ಹೆಸರು : ಶ್ರೀ ರಹೀಂ ಖಾನ್ (ಬೀದರ್)
ಉತ್ತರಿಸುವ ಸಚಿವರು : ಶ್ರೀ ಸಿ.ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಪ್ರಶ್ನೆಗಳು:–

ಅ) ಬೀದರ್ ಜಿಲ್ಲೆಯ ಬೀದರ್ ಉತ್ತರ ಮತ ಕ್ಷೇತ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2008 ರಿಂದ ಇಲ್ಲಿಯವರೆಗೆ ಅನುಷ್ಠಾನಗೊಂಡ ಯೋಜನೆಗಳಾವವು? (ವಿವರ ನೀಡುವುದು);

ಆ) ಯೋಜನೆಗಳಿಗೆ ವೆಚ್ಚಮಾಡಿದ ಹಣವೆಷ್ಟು? (ಯೋಜನಾವಾರು ವಿವರ ಒದಗಿಸುವುದು);